# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

## <u>ಸ್ಪೆಷಲ್ ಕೇಸ್(ಎನ್.ಡಿ.ಪಿ.ಎಸ್) ಸಂಖ್ಯೆ: 11/2022</u>

ಪಿಡಬ್ಲ್ಯೂ: 05
ಸಿಡಬ್ಲ್ಯೂ: 07

<u>ದಿನಾಂಕ: **28-04-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಸಾಕ್ಷಿದಾರರ ಹೆಸರು | : ಡಿ.ಬಿ. ಅವಿನಾಶ್ |
| ತಂದೆಯ ಹೆಸರು | : ಬಸಪ್ಪ ಡಿ.ಹೆಚ್. |
| ವಯಸ್ಸು | : 37 ವರ್ಷ |
| ಉದ್ಯೋಗ | : ಅಬಕಾರಿ ನಿರೀಕ್ಷಕರು, ಹೊಸದುರ್ಗ ವಲಯ |
| ವಾಸ ಸ್ಥಳ | : ಹೊಸದುರ್ಗ |

<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:</u>

ದಿನಾಂಕ **24–02–2021** ರಿಂದು **20–06–2022** ರವರೆಗೆ ಅಬಕಾರಿ ನಿರೀಕ್ಷಕನೆಂದು ಅಬಕಾರಿ ಉಪ ಆಯುಕ್ತರ ಕಛೇರಿ, ಚಿತ್ರದುರ್ಗದಲ್ಲಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ **04–10–2021** ರಂದು ರಾತ್ರಿ **9.00** ಗಂಟೆ ಸಮಯದಲ್ಲಿ ಶಿವಮೂರ್ತಿ, ಹನುಮಂತರೆಡ್ಡಿ ಹಾಗೂ ಸಿದ್ದೇಶ್ ನಾಯ್ಕ ಇವರೊಂದಿಗೆ ಚಳ್ಳಕೆರೆ ಪಟ್ಟಣದ ಗಸ್ತಿನಲ್ಲಿದ್ದಾಗ ಮಾಹಿತಿದಾರರಿಂದ ಮಾಹಿತಿ ಬಂದಿದ್ದು ಸದರಿ ಮಾಹಿತಿಯಲ್ಲಿ ಚಳ್ಳಕೆರೆ ತಾಲ್ಲೂಕು, ಪರಶುರಾಂಪುರ ಹೋಬಳಿ, ಕೋನಿಗರಹಳ್ಳಿ ಕಾವಲಿನ ಲಿಂಗಪ್ಪ ಬಿನ್ ಬೊಮ್ಮಪ್ಪ ಎಂಬುವವರ ಕೃಷಿ ಜಮೀನಿನಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುತ್ತಾರೆಂದು ತಿಳಿಸಲಾಗಿದ್ದು ಆ ಮಾಹಿತಿಯನ್ನು ನಾನು ಲಿಖಿತವಾಗಿ ದಾಖಲಿಸಿಕೊಂಡೆ. ಸದರಿ ಲಿಖಿತ ದಾಖಲೆಯನ್ನು ನೋಡುತ್ತಿದ್ದು ಅದನ್ನು ನಿಪಿ–**5** ಎಂದು ನನ್ನ ಸಹಿಯನ್ನು ನಿಪಿ–**5**(ಎ) ಎಂದು ಗುರುತಿಸಲಾಯಿತು. ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ಕಾಲಾವಕಾಶ ಇಲ್ಲದೇ ಇದ್ದ ಕಾರಣ ಉಪ ಆಯುಕ್ತರು, ಚಿತ್ರದುರ್ಗ ಇವರಿಗೆ ದೂರವಾಣಿ ಮೂಲಕ ತಿಳಿಸಿ ಅವರಿಂದ ಅನುಮತಿಯನ್ನು ಪಡೆದೆ. ಅಲ್ಲದೇ ಆ ವಲಯದ ಅಬಕಾರಿ ನಿರೀಕ್ಷಕರಾದ ಕೃಷ್ಣಸ್ವಾಮಿ ಇವರಿಗೆ ಮಾಹಿತಿ ನೀಡಿ ಅವರೂ ಕೂಡಾ ಸಹಕರಿಸುವಂತೆ ಕೇಳಲಾಯಿತು. ಪಂಚರಾದ ತಿಪ್ಪಣ್ಣ ಹಾಗೂ ಬಸವರಾಜ್ ಇವರ ಬಗ್ಗೆ ತಿಳಿದುಕೊಂಡು ಅವರ ದೂರವಾಣಿ ಸಂಖ್ಯೆಗಳನ್ನು ಪಡೆದು ಅವರಿಗೂ ಕೂಡಾ ಪಂಚರಾಗಿ ಸಹಕರಿಸುವಂತೆ ಸೂಚಿಸಲಾಯಿತು.

**2.** ನಂತರ ನಾವೆಲ್ಲಾ ಸೇರಿಕೊಂಡು ಆ ಸ್ಥಳಕ್ಕೆ ಸುಮಾರು ರಾತ್ರಿ **9.50** ಕ್ಕೆ ಹೋದೆವು. ಆ ಸ್ಥಳದಲ್ಲೇ ನಾನು ಆ ಪಂಚರುಗಳಿಗೆ ನೋಟೀಸನ್ನು ಕೊಟ್ಟೆ. ಆ ಪೈಕಿ ತಿಪ್ಪಣ್ಣ ಇವರಿಗೆ ನೀಡಿದ ನೋಟೀಸ್ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**1** ಎಂದು ಗುರುತಿಸಲಾಗಿದ್ದು, ಬಸವರಾಜ್ ಇವರಿಗೆ ನೀಡಿದ ನೋಟೀಸ್ ನೋಡುತ್ತಿದ್ದು ಅದನ್ನು ನಿಪಿ–**6** ಎಂದು ಗುರುತಿಸಲಾಯಿತು. ಆ ಜಮೀನಿನ ಸರ್ವೆ ನಂಬರನ್ನು ಆ ಗ್ರಾಮ ಲೆಕ್ಕಾಧಿಕಾರಿಗಳಿಂದ ಪಡೆದು

ನನ್ನ ರೆಕಾರ್ಡ್ ಆಫ್ ರೀಸನ್ಸ್ ನಲ್ಲಿ ಸರ್ವೆ ನಂಬರನ್ನು ನಮೂದಿಸಿದೆ. ಸದರಿ ರೆಕಾರ್ಡ್ ಆಫ್ ರೀಸನ್ಸ್ ನ್ನು ನೋಡುತ್ತಿದ್ದು ಅದನ್ನು ನಿಪಿ–7 ಎಂದು ಗುರುತಿಸಲಾಯಿತು. ಆ ಜಮೀನನ್ನು ಪರಿಶೀಲಿಸಲಾಗಿ ಅದರಲ್ಲಿ **2** ರಿಂದ **3** ವರ್ಷದ ಅಡಿಕೆ ಗಿಡಗಳು ಇದ್ದವು. ಆ ಜಮೀನಿನಲ್ಲಿದ್ದಂತಹ ಕಾಲು ದಾರಿಯ ಮೂಲಕ ಹೋದಾಗ ಆ ಜಮೀನಿನ ವಾಯುವ್ಯ ದಿಕ್ಕಿಗೆ ಒಂದು ಕೃಷಿ ಹೊಂಡ ಇತ್ತು ಮತ್ತು ಆ ಕೃಷಿ ಹೊಂಡದ ಪಕ್ಕದಲ್ಲಿಯೇ ಒಂದು ಗುಡಿಸಲು ಇತ್ತು. ನಾವು ಅದನ್ನು ಪರಿಶೀಲನೆ ಮಾಡಿದಾಗ ಆ ಕೃಷಿ ಹೊಂಡದ ಬದುವಿನಲ್ಲಿ ನಾಲ್ಕು ಗಾಂಜಾ ಗಿಡಗಳು ಇರುವುದು ಕಂಡುಬಂತು. ಆ ಗಿಡಗಳಿಗೆ ಪಾತಿ ಮಾಡಿ ನೀರನ್ನು ಬಿಟ್ಟು ಕೊಟ್ಟಿಗೆ ಗೊಬ್ಬರವನ್ನು ಹಾಕಲಾಗಿತ್ತು. ನಮ್ಮನ್ನು ನೋಡುತ್ತಿದ್ದಂತೆ ಆ ಗುಡಿಸಲಿನಲ್ಲಿದ್ದಂತಹ ವ್ಯಕ್ತಿ ಎದ್ದು ಬಂದ. ಆತನ ಹೆಸರನ್ನು ವಿಚಾರಿಸಲಾಗಿ ಆತ ತನ್ನ ಹೆಸರನ್ನು ಲಿಂಗಪ್ಪ ಬಿನ್ ಬೊಮ್ಮಪ್ಪ ಎಂದು ತಿಳಿಸಿದ. ಆ ಗಾಂಜಾ ಗಿಡಗಳನ್ನು ಯಾವ ಕಾರಣಕ್ಕಾಗಿ ಬೆಳೆದಿರುವ ಎಂದು ವಿಚಾರಿಸಿದಾಗ ಆತ ಅದನ್ನು ಸ್ವಂತ ಬಳಕೆಗಾಗಿ ಬೆಳೆದಿದ್ದಾಗಿ ಹೇಳಿದ. ನಮ್ಮ ಸಿಬ್ಬಂದಿಗಳ ಸಹಾಯದಿಂದ ಆ ಗಿಡಗಳನ್ನು ಕೀಳಿಸಲಾಯಿತು. ಆ ಸ್ಥಳದಲ್ಲಿ ಇನ್ನೂ ಮೂರು ಕಾಂಡಗಳು ಕಟಾವು ಮಾಡಿರುವಂತಹದ್ದು ಕಂಡುಬಂದವು. ಅವೆಲ್ಲವುಗಳನ್ನು ನಾವು ನಮ್ಮ ಎಲೆಕ್ಟ್ರಾನಿಕ್ ಯಂತ್ರದಲ್ಲಿ ತೂಕ ಮಾಡಿ ನೋಡಲಾಗಿ ಅವು ಒಟ್ಟು **7** ಕೆಜಿ **150** ಗ್ರಾಂ ಇರುವುದು ಕಂಡುಬಂತು.

**3**. ಮತ್ತೆ ಬೇರೆ ಕಡೆ ಗಾಂಜಾ ಗಿಡಗಳನ್ನು ಬೆಳೆದ ಬಗ್ಗೆ ಆತನನ್ನು ವಿಚಾರಿಸಲಾಗಿ ಆರೋಪಿ ತನ್ನ ಸೋದರ ಸಂಬಂಧಿ ಲಕ್ಷ್ಮಣ ಎಂಬುವವರ ಜಮೀನಿಗೆ ಕರೆದುಕೊಂಡು ಹೋಗಿ ಅಲ್ಲಿಯೂ ಕೂಡಾ ಕೃಷಿ ಹೊಂಡದ ಪಕ್ಕದಲ್ಲಿ ಗಾಂಜಾ ಗಿಡಗಳು ಬೆಳೆದಿದ್ದ ಬಗ್ಗೆ ತೋರಿಸಿದ. ಆ ಸ್ಥಳವನ್ನು ಪರಿಶೀಲಿಸಲಾಗಿ ಅಲ್ಲಿ ಗಾಂಜಾ ಗಿಡಗಳು ಇರಲಿಲ್ಲ. ಆದರೆ ಆ ಗಿಡಗಳು ಇದ್ದ ಬಗ್ಗೆ ಕುರುಹುಗಳು ಕಂಡುಬಂದವು. ಆ ಜಮೀನಿನ ದಕ್ಷಿಣದಲ್ಲಿ ಲಕ್ಷ್ಮಣ ಈತನ ಮನೆ ಇದ್ದು ನಮ್ಮ ಸಿಬ್ಬಂದಿಗಳನ್ನು ಕಳುಹಿಸಿ ಆತನನ್ನು ನಮ್ಮ ಬಳಿ ಕರೆಸಿಕೊಂಡು ವಿಚಾರಿಸಲಾಗಿ ಮೊದಲು ಆತ ಏನನ್ನೂ ಹೇಳಲು ಇಷ್ಟಪಡಲಿಲ್ಲ**,** ಆದರೆ ಮತ್ತೆ ವಿಚಾರಣೆ ಮಾಡಿದಾಗ ನಾವು ಬಂದದ್ದು ನೋಡಿ ಆ ಗಿಡಗಳನ್ನು ಕಿತ್ತು ಕೃಷಿ ಹೊಂಡದಲ್ಲಿ ಹಾಕಿದ್ದಾಗಿ ಹೇಳಿದ. ಅವುಗಳನ್ನು ಹೊಂಡದಿಂದ ತೆಗೆದು ನೋಡಿದಾಗ ಅಲ್ಲಿ ಒಟ್ಟು ಎರಡು ಗಿಡಗಳು ಹಾಗೂ ಒಂದು ಕಟಾವು ಮಾಡಿದ ಕಾಂಡದ ಭಾಗ ಇದ್ದದ್ದು ಕಂಡುಬಂತು. ಅವುಗಳನ್ನು ತೂಕ ಮಾಡಿ ನೋಡಿದಾಗ ಅವು **6** ಕೆಜೆ **350** ಗ್ರಾಂ ಇದ್ದವು. ಆರೋಪಿತನ ಹೆಸರನ್ನು ಕೇಳಲಾಗಿ ಆತ ತನ್ನ ಹೆಸರನ್ನು ಲಕ್ಷ್ಮಣ ಬಿನ್ ಉಗ್ರಪ್ಪ ಎಂದು ತಿಳಿಸಿದ. ಅಲ್ಲದೇ ಗ್ರಾಮ ಲೆಕ್ಕಾಧಿಕಾರಿಗಳಿಂದ ಆ ಜಮೀನಿನ ಸರ್ವೆ ನಂಬರನ್ನು ಖಚಿತಪಡಿಸಿಕೊಂಡೆವು. ಅಲ್ಲಿ ಸಿಕ್ಕಂತಹ ಎರಡು ಗಿಡ ಹಾಗೂ ಒಂದು ಕಾಂಡ ಇವುಗಳನ್ನು ತೆಗೆದುಕೊಂಡು **1** ನೇ ಆರೋಪಿತನ ಜಮೀನಿಗೆ ಬಂದು ಆ ಎರಡೂ ಜಮೀನುಗಳಲ್ಲಿ ಸಿಕ್ಕಂತಹ ಗಿಡಗಳನ್ನು ಮತ್ತು ಕಾಂಡಗಳನ್ನು ತೂಕ ಮಾಡಲಾಗಿ **13** ಕೆಜಿ **450** ಇರುವುದು ಕಂಡುಬಂತು. ಆ ಗಿಡಗಳನ್ನು ಒಂದು

ಬಿಳಿ ಬಣ್ಣದ ಟಾರ್ಪಲ್ ಚೀಲದಲ್ಲಿ ಹಾಕಿ ಚೀಲವನ್ನು ದಾರದಿಂದ ಹೊಲೆದು, ಇಲಾಖಾ ಸೀಲನ್ನು ಹಾಕಲಾಯಿತು. ಮಾದರಿ ಚೀಟಿಯನ್ನು ತಯಾರಿಸಿ ಅದಕ್ಕೆ ಅಂಟಿಸಲಾಯಿತು. ಅಲ್ಲದೇ ಲೀಸ್ಟ್ ಆಫ್ ಆರ್ಟಿಕಲ್ಸನ್ನು ತಯಾರಿಸಲಾಯಿತು. ಮಾದರಿ ಸೀಲನ್ನು ಕೂಡಾ ತಯಾರಿಸಲಾಯಿತು. ಲೀಸ್ಟ್ ಆಫ್ ಆರ್ಟಿಕಲ್ಸನ್ನು ನೋಡುತ್ತಿದ್ದು ನಿಪಿ–**8** ಎಂದು, ಮಾದರಿ ಸೀಲಿನ ನಕಲು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**3** ಎಂದು ಗುರುತಿಸಿದೆ. ಆರೋಪಿತರನ್ನು ದಸ್ತಗಿರಿ ಮಾಡಿ ದಸ್ತಗಿರಿ ನಿಯಮಗಳನ್ನು ಪಾಲಿಸಿದೆವು. ಅಲ್ಲದೇ ಆ ಸ್ಥಳದಲ್ಲೆ ಪಂಚನಾಮೆಯನ್ನು ತಯಾರಿಸಲಾಯಿತು. ಆ ಪಂಚನಾಮೆ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**2** ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**2**(ಇ) ಎಂದು ಗುರುತಿಸಲಾಯಿತು.

**4.** ನಂತರ ಆರೋಪಿತರನ್ನು ಹಾಗೂ ಮಾಲನ್ನು ಚಿತ್ರದುರ್ಗ ಕಛೇರಿಗೆ ತಂದು ಪ್ರಕರಣವನ್ನು ದಾಖಲಿಸಲಾಯಿತು. ಆ ಕುರಿತು ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ನಿಪಿ–**9** ಎಂದು ಗುರುತಿಸಲಾಯಿತು. ದಿನಾಂಕ **05–10–2021** ರಂದು ಆರೋಪಿತರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ಆರೋಪಿತರನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದು ಗುರುತಿಸುತ್ತೇನೆ. ಮಾದರಿ ಗಾಂಜಾ ಪ್ಯಾಕೇಟನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು **1** ಎಂದು ಗುರುತಿಸಲಾಗಿದೆ. ದಿನಾಂಕ **13–10–2021** ರಂದು ಚಳ್ಳಕೆರೆ ನ್ಯಾಯಾಲಯದಲ್ಲಿ ಇನ್ವೆಂಟರಿ ಮಾಡಿಸಿದ್ದೇನೆ. ಆ ಕಾಲಕ್ಕೆ ಮುದ್ದೆ ಮಾಲು **1** ನ್ನು ತೆಗೆಯಲಾಯಿತು. ಆ ಇನ್ವೆಂಟರಿಯ ಕಡತವನ್ನು ನೋಡುತ್ತಿದ್ದು ಅದನ್ನು ನಿಪಿ–**10** ಎಂದು ಗುರುತಿಸಲಾಯಿತು. ದಿನಾಂಕ **21–10–2021** ರಂದು ಎಫ್.ಎಸ್.ಎಲ್. ಬೆಂಗಳೂರಿಗೆ ಶಿವಮೂರ್ತಿ ಮೂಲಕ ಮಾದರಿಯನ್ನು ವಿಶ್ಲೇಷಣೆಗಾಗಿ ಕಳುಹಿಸಲಾಯಿತು. ಪ್ರಕರಣದ ಮುಂದಿನ ತನಿಖೆಯನ್ನು ದಿನಾಂಕ **06–11–2021** ರಂದು ಕೃಷ್ಣಸ್ವಾಮಿ ಇವರಿಗೆ ವಹಿಸಿದೆ.

ಪಾಟೀ ಸವಾಲು: ಶ್ರೀ ಎನ್.ಜಿ.ಕೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>**

**<u>ಸ್ಪೆಷಲ್ ಕೇಸ್(ಎನ್.ಡಿ.ಪಿ.ಎಸ್) ಸಂಖ್ಯೆ: 11/2022</u>**

ಪಿಡಬ್ಲ್ಯೂ: 04
ಸಿಡಬ್ಲ್ಯೂ: 04

**<u>ದಿನಾಂಕ: 28-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಸಾಕ್ಷಿದಾರರ ಹೆಸರು : ಶಿವಮೂರ್ತಿ
ತಂದೆಯ ಹೆಸರು : ಶರಣಪ್ಪ
ವಯಸ್ಸು : 37 ವರ್ಷ
ಉದ್ಯೋಗ : ಸಹ ಶಿಕ್ಷಕರು
ವಾಸ ಸ್ಥಳ : ಹೊನ್ನಳ್ಳಿ

**<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:</u>**

ದಿನಾಂಕ **16–09–2019** ರಿಂದ **21–05–2022** ರವರೆಗೆ ಅಬಕಾರಿ ಪೇದೆ ಎಂದು ಸೇವೆ ಸಲ್ಲಿಸಿದ್ದೇನೆ. ದಿನಾಂಕ **04–10–2021** ರಂದು ಸಂಜೆ **8.50** ಕ್ಕೆ ಚಳ್ಳಕೆರೆ ಪಟ್ಟಣದಲ್ಲಿ ನಾನು, ಅಬಕಾರಿ ನಿರೀಕ್ಷಕರಾದ ಅವಿನಾಶ್ ಡಿ.ಬಿ., ಸಿದ್ದೇಶ್ ನಾಯ್ಕ ಅಬಕಾರಿ ಉಪ ನಿರೀಕ್ಷಕರು, ಹನುಮಂತರೆಡ್ಡಿ ಮುಖ್ಯ ಪೇದೆ ಹಾಗೂ ವಾಹನ ಚಾಲಕರಾದ ಮಂಜೇಶ್ ಚೌಹಾನ್ ಗಸ್ತು ನಡೆಸುತ್ತಿರುವ ಸಂದರ್ಭದಲ್ಲಿ ಅಬಕಾರಿ ನಿರೀಕ್ಷಕರಿಗೆ ದೂರವಾಣಿಯ ಮೂಲಕ ಹೊಲದಲ್ಲಿ ಗಾಂಜಾ ಗಿಡಗಳನ್ನು ಬೆಳೆದ ಬಗ್ಗೆ ಮಾಹಿತಿ ಬಂದಿದ್ದು ಆ ಕಾರಣ ಅಬಕಾರಿ ನಿರೀಕ್ಷಕರು ದೂರವಾಣಿ ಕರೆಯ ಮೂಲಕ ತಿಪ್ಪಣ್ಣ ಗ್ರಾಮ ಲೆಕ್ಕಾಧಿಕಾರಿಗಳು, ಗೋಸಿನಕೆರೆ ಮತ್ತು ಬಸವರಾಜ್, ಗ್ರಾಮ ಲೆಕ್ಕಾಧಿಕಾರಿ ಪಗಡಲಬಂಡೆ ಗ್ರಾಮ ಇವರಿಗೆ ಮಾಹಿತಿಯನ್ನು ತಿಳಿಸಿ ಅವರಿಗೆ ಪಂಚರಾಗಿ ಬರಬೇಕೆಂದು ಕೋರಿದ್ದರ ಮೇರೆಗೆ ಅವರು ನಮ್ಮೊಟ್ಟಿಗೆ ಚಳ್ಳಕೆರೆ ವಲಯದ ಅಬಕಾರಿ ನಿರೀಕ್ಷಕರು ಹಾಗೂ ಅವರ ಸಿಬ್ಬಂದಿಗಳೊಂದಿಗೆ ಕೊನಿಕೆರೆ ಗ್ರಾಮ, ಕೊನಿಕೆರೆ ಕಾವಲ್, ಪರಶುರಾಂಪುರ ಹೊಬಳಿ, ಚಳ್ಳಕೆರೆ ತಾಲ್ಲೂಕಿನ ಸರ್ವೆ ನಂ.**24** ರ ಜಮೀನಿಗೆ ಹೋಗಿದ್ದೆವು. ಆ ಜಮೀನಿನಲ್ಲಿ ಶೋಧನೆಗೂ ಮೊದಲು ಪಂಚರಿಗೆ ಮನವಿಪತ್ರವನ್ನು ನೀಡಿ ಅವರ ಸಹಿ ಪಡೆಯಲಾಯಿತು. ಕಾಲಾವಕಾಶದ ಅಬಾವದಿಂದ ವಾರೆಂಟನ್ನು ನ್ಯಾಯಾಲಯದಿಂದ ಪಡೆಯಲು ಸಾಧ್ಯವಾಗದಿದ್ದರಿಂದ ಅಬಕಾರಿ ನಿರೀಕ್ಷಕರು ತಮ್ಮ ಮೇಲಿನ ಅಧಿಕಾರಿಗಳಿಗೆ ವಿಷಯ ತಿಳಿಸಿ ಶೋಧನೆಗೆ ಅನುಮತಿ ಪಡೆದಿದ್ದು ಅದನ್ನು ಪಂಚರಿಗೆ ತಿಳಿಸಿ ಶೋಧನಾ ಕಾರ್ಯವನ್ನು ಆರಂಭಿಸಲಾಯಿತು.

**2.** ಆ ಜಮೀನಿನ ವಾಯುವ್ಯ ದಿಕ್ಕಿನಲ್ಲಿ ಒಂದು ಕೃಷಿ ಹೊಂಡದ ಬಳಿ ಒಂದು ಸಣ್ಣ ಗುಡಿಸಲು ಇದ್ದು ಅದರ ಸುತ್ತಲೂ ಪರಿಶೀಲಿಸಲಾಗಿ ಆ ಹೊಂಡದ ಪಕ್ಕದಲ್ಲಿ ಪಾತಿ ಮಾಡಿ ಬೆಳೆಸಿದ **4** ಗಿಡಗಳು ಕಂಡುಬಂದಿದ್ದು ಅವುಗಳನ್ನು ನಮ್ಮ ಅಧಿಕಾರಿಗಳು ಪರಿಶೀಲಿಸಿ ಅವರು

ತಮ್ಮ ಅನುಭವದಿಂದ ಆ ಗಿಡಗಳು ಗಾಂಜಾ ಗಿಡಗಳೆಂದು ಅಭಿಪ್ರಾಯಪಟ್ಟಿದ್ದು, ಅದೇ ವೇಳೆಗೆ ಆ ಗುಡಿಸಲಿನಿಂದ ಒರ್ವ ವ್ಯಕ್ತಿ ಹೊರಗೆ ಬಂದು ನಮ್ಮ ಹತ್ತಿರ ಬಂದಿದ್ದು ಆ ವ್ಯಕ್ತಿಯನ್ನು ವಿಚಾರಿಸಲಾಗಿ ಆತ ತನ್ನ ಹೆಸರನ್ನು ಲಿಂಗಪ್ಪ ಬಿನ್ ಬೊಮ್ಮಪ್ಪ ಎಂದು ಹೇಳಿದ್ದು ಆ ಜಮೀನು ತನಗೇ ಸೇರಿದ್ದು ಎಂದು ತಿಳಿಸಿದ. ಆ ನಾಲ್ಕೂ ಗಿಡಗಳನ್ನು ಆತನಿಗೆ ತೋರಿಸಲಾಗಿ ಆತ ಆ ಗಿಡಗಳು ಗಾಂಜಾ ಗಿಡಗಳೆಂದು ಒಪ್ಪಿಕೊಂಡಿದ್ದಲ್ಲದೇ ತನ್ನ ಸ್ವಂತ ಸೇವನೆಗೆಂದು ಅವುಗಳನ್ನು ಬೆಳೆಸಿದ್ದಾಗಿ ತಿಳಿಸಿದ. ಆ ನಾಲ್ಕೂ ಗಿಡಗಳನ್ನು ಬಡ್ಡೆಗಳ ಸಮೇತ ತೂಕ ಮಾಡಲಾಗಿ ಅವು **7** ಕೆಜೆ **150** ಗ್ರಾಂ ಇದ್ದು ಸದರಿ ಆರೋಪಿತನನ್ನು ತಕ್ಷಣವೇ ಬಂದಿಸಲಾಯಿತು.

**3.** ಆ ಜಮೀನಿನಲ್ಲಿ ಅಥವಾ ಆ ಜಮೀನಿನ ಅಕ್ಕಪಕ್ಕದಲ್ಲಿ ಬೇರೆ ಕಡೆ ಗಾಂಜಾ ಗಿಡಗಳನ್ನು ಬೆಳೆಸಿದ ಬಗ್ಗೆ ಆತನನ್ನು ವಿಚಾರಿಸಲಾಯಿತು. ಆ ಸ್ಥಳದಿಂದ **80–100** ಮೀ ಅಂತರದಲ್ಲಿ ಆತ ನಮ್ಮನ್ನು ಕರೆದುಕೊಂಡು ಹೋಗಿ ಇನ್ನೊಂದು ಜಮೀನನ್ನು ತೋರಿಸಿದ್ದು ನಾವು ಅದನ್ನು ಪರಿಶೀಲಿಸಲಾಗಿ ಆ ಜಮೀನಿನಲ್ಲಿ ಯಾವುದೇ ಕುರುಹುಗಳು ಸಿಗಲಿಲ್ಲ. ಆದರೆ ಪಕ್ಕದಲ್ಲೆ ಒಂದು ಮನೇ ಇದ್ದದ್ದು ಕಂಡುಬಂತು ಮತ್ತು ಸದರಿ ಮನೆ ಆರೋಪಿತನ ಸೋದರ ಸಂಬಂಧಿಯದ್ದು ಎಂದು ತಿಳಿದು ಬಂತು. ಆ ಮನೆಯಲ್ಲಿದ್ದ ವ್ಯಕ್ತಿಗಳನ್ನು ಕರೆದುಕೊಂಡು ಬರದು ನಮ್ಮ ಮೆಲಾಧಿಕಾರಿಗಳು ಸೂಚಿಸಿದರು. ಅದರಂತೆ ನಾವು ಆ ಮನೆಯಲ್ಲಿದ್ದ ಒಬ್ಬ ವ್ಯಕ್ತಿಯನ್ನು ಕರೆದುಕೊಂಡುಬಂದು ಹಾಜರುಪಡಿಸಿದಾಗ ಆತ ತನ್ನ ಹೆಸರನ್ನು ಲಕ್ಷ್ಮಣ ಬಿನ್ ಉಗ್ರಪ್ಪ ಎಂದು ತಿಳಿಸಿದ್ದು ಗಾಂಜಾ ಗಿಡಗಳ ಬಗ್ಗೆ ಆತನನ್ನು ವಿಚಾರಿಸಿದಾಗ ನಾವು ಬರುವುದನ್ನು ನೋಡಿ ತನ್ನ ಮನೆಯ ಪಕ್ಕದಲ್ಲಿದ್ದಂತಹ ಸ್ಥಳದಿಂದ ಮೂರು ಗಾಂಜಾ ಗಿಡಗಳನ್ನು ಕಿತ್ತು ಕೃಷಿ ಹೊಂಡದಲ್ಲಿ ಬಿಸಾಕಿದ್ದ. ಆ ಗಿಡಗಳನ್ನು ನಾವು ಆ ಹೊಂಡದಿಂದ ಮೇಲಕ್ಕೆತ್ತಿ ಪರಿಶೀಲಿಸಲಾಗಿ ಸುಮಾರು 7 ಅಡಿ ಎತ್ತರದ ಒಂದು ಗಾಂಜಾ ಗಿಡ, ನಾಲ್ಕೂವರೆ ಅಡಿ ಎತ್ತರದ ಒಂದು ಗಾಂಜಾ ಗಿಡ ಹಾಗೂ ಒಂದು ಬುಡ ಇದ್ದದ್ದು ಕಂಡುಬಂತು ಅವುಗಳ ಒಟ್ಟು ತೂಕ **6** ಕೆಜಿ **350** ಗ್ರಾಂ ಇದ್ದದ್ದು ಕಂಡುಬಂತು. ಸದರಿ ಆರೋಪಿತನನ್ನು ಕೂಡಾ ನಮ್ಮ ವಶಕ್ಕೆ ತೆಗೆದುಕೊಳ್ಳಲಾಯಿತು.

**4.** ಆ ಎರಡೂ ಸ್ಥಳಗಳಿಂದ ಸಂಗ್ರಹಿಸಲಾದ ಗಾಂಜಾ ಗಿಡಗಳನ್ನು ತೂಕ ಮಾಡಿ ನೋಡಲಾಗಿ ಅವುಗಳ ಒಟ್ಟು ತೂಕ **13** ಕೆಜಿ **450** ಇರುವುದು ಕಂಡುಬಂತು.ಆ ಗಿಡಗಳನ್ನು ಪಂಚರ ಸಮಕ್ಷಮ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಆ ಚೀಲವನ್ನು ಹೊಲೆದು ಸೀಲು ಮಾಡಲಾಯಿತು. ಮಾದರಿ ಸೀಲುಗಳ ಚೀಟಿಗಳನ್ನು ತಯಾರಿಸಿ ಪಂಚರ ಸಹಿ ಪಡೆದು ಆ

ಚೀಟಿಗಳನ್ನು ಚೀಲಕ್ಕೆ ಅಂಗಿಸಲಾಯಿತು. ತದ ನಂತರ ವಸ್ತುಗಳ ಪಟ್ಟಿ ಅದರಲ್ಲಿ ತಯಾರಿಸಿ ಅದರಲ್ಲೂ ಕೂಡಾ ಪಂಚರ ಸಹಿಗಳನ್ನು ಪಡೆಯಲಾಯಿತು, ಆ ಗಿಡಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಮಹಜರ್ ಮಾಡಲಾಗಿದ್ದು ಅದನ್ನು ನೋಡುತ್ತಿದ್ದು ಸದರಿ ಮಹಜರನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ-**2**(ಡಿ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ರಾತ್ರಿ **10.30** ರಿಂದ **11.40** ರವರೆಗೆ ಮಾಡಲಾಯಿತು. ಎರಡನೇ ಜಮೀನಿನ ಸರ್ವೆ ನಂ.**104** ಇರುತ್ತದೆ. ಮಾಲನ್ನು ಹಾಗೂ ಆರೋಪಿತರನ್ನು ನಮ್ಮ ಮೇಲಾಧಿಕಾರಿಗಳು ತಮ್ಮ ವಶಕ್ಕೆ ತೆಗೆದುಕೊಂಡಿದ್ದು ಮುಂದೆ ದಿನಾಂಕ **22-10-2021** ರಂದು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ಗಾಂಜಾವನ್ನು ಬೆಂಗಳೂರಿಗೆ ತೆದುಕೊಂಡು ಹೋಗಿ ಎಫ್.ಎಸ್.ಎಲ್.ಗೆ ತಲುಪಿಸಿದೆ. ಸದರಿ ಮಾದರಿ ಗಾಂಜಾವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು **1** ಎಂದು ಗುರುತಿಸಲಾಗಿದೆ. ಆರೋಪಿತರು ನ್ಯಾಯಾಲಯದಲ್ಲಿ ಹಾಜರಿದ್ದು ಅವರನ್ನು ಗುರುತಿಸುತ್ತೇನೆ.

**ಪಾಟೀ ಸವಾಲು: ಶ್ರೀ ಎನ್.ಜಿ.ಕೆ ವಕೀಲರಿಂದ ಆರೋಪಿತರ ಪರವಾಗಿ:**

**5.** ನಮ್ಮ ಮೇಲಾಧಿಕಾರಿಗಳು ತಮಗೆ ಬಂದಂತಹ ಮಾಹಿತಿಯಲ್ಲಿಯ ಜಮೀನಿನ ಸರ್ವೆ ನಂಬರುಗಳನ್ನಾಗಲೀ ಅಥವಾ ಆ ಜಮೀನುಗಳ ಮಾಲೀಕರ ಹೆಸರನ್ನಾಗಲೀ ನಮಗೆ ತಿಳಿಸಲಿಲ್ಲ. ಕೊನಿಕೆರೆ ಕಾವಲ್ ಚಳ್ಳಕೆರೆಯಿಂದ ಸುಮಾು **24-25** ಕಿಮೀ ದೂರದಲ್ಲಿದೆ. ಕೊನಿಕೆರೆ ಗ್ರಾಮಕ್ಕೂ ಮತ್ತು ಕೋನಿಕೆರೆ ಕಾವಲ್ಲೂ ಸುಮಾರು **2** ಕಿಮೀಗಳ ಅಂತರ ಇದೆ. ಪಂಚರಾದ ತಿಪ್ಪಣ್ಣ ಇವರ ಗೋಸಿಕೆರೆ ಗ್ರಾಮ ಮತ್ತು ಬಸವರಾಜ್ ಇವರ ಪಗಡಲಬಂಡೆ ಗ್ರಾಮ ಇವುಗಳು ಕೊನೀಕೆರೆ ಕಾವಲ್ ನಿಂದ ತುಮಾರು **50** ಕಿಮೀ ದೂರದಲ್ಲಿ ಬರುತ್ತವೆ ಎಂದರೆ ನಮ್ಮ ಅಬಕಾರಿ ನಿರೀಕ್ಷಕರು ಅವರಿಗೆ ಪೋನ್ ಮಾಡಿದಾಗ ಆ ವ್ಯಕ್ತಿಗಳು ತಾವು ಎಲ್ಲಿ ಇದ್ದೇವೆಂದು ಹೇಳಲಿಲ್ಲ ಆದರೆಕೂನೀಕೆರೆ ಕಾವಲ್ ಜಮಿನಿಗೆ ತಾವುಗಳು ಬರುವುದಾಗಿ ತಿಳಿಸಿದರು. ನಮ್ಮ ಅಬಕಾರಿ ನಿರೀಕ್ಷಕರು ಅವರಿಗೆ ಬರುವಂತೆ ತಿಳಿಸಿದಾಗ ಆ ಪಂಚರು ಯಾವ ಸ್ಥಳದಲ್ಲಿದ್ದರೆಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಆ ಕೊನೀಕೆರೆ ಗ್ರಾಮವನ್ನಾಗಲೀ ಅಥವಾ ಕೊನೀಕೆರೆ ಕಾವಲನ್ನಾಗಲೀ ಆ ಮೊದಲು ನಾನು ನೋಡಿರಲಿಲ್ಲ ಎನ್ನುವುದು ನಿಜ. ಅಬಕಾರಿ ನಿರೀಕ್ಷಕರೆ ನಮ್ಮನ್ನು ಆ ಜಮೀನುಗಳಿಗೆ ಕರೆದುಕೊಂಡು ಹೋದರು. ಆ ಸ್ಥಳಕ್ಕೆ ಹೋಗುವ ಕಾಲಕ್ಕೆ ಜಮೀನುಗಳ ಪಹಣಿ ತೆಗೆದುಕೊಂಡು ಹೂೕಗಿಲ್ಲ ಎನ್ನುವುದು ನಿಜ. ನಮ್ಮ ಮೇಲಾಧಿಕಾರಿಗೆ ಮಾಹಿತಿ ನೀಡಿದಂತಹ ವ್ಯಕ್ತಿ ಜಮೀನಿನ ಸರ್ವೆ ನಂಬರ್ ಬಗ್ಗೆ ಹೇಳಿರಲಿಲ್ಲ. ಆದರೆ ಅದರ ಬಗ್ಗೆ ವಿವರಣೆ ನೀಡಿದ್ದರು. ಸದರಿ ಸರ್ವೆ ನಂ.**24** ರ ಜಮೀನು ಎಷ್ಟು ಎಕರೆ ಇತ್ತು ಎಂದು ನನಗೆ ಗೊತ್ತಿಲ್ಲ. ಅದು ಖುಷ್ಕಿ ಜಮೀನು ಇತ್ತು. ಆ ಕೃಷಿ ಹೊಂಡದ ಉದ್ದ ಅಗಲ ಹೇಳಲು ಸಾಧ್ಯವಾಗುವುದಿಲ್ಲ. ಆ ಹೊಂಡದ ಯಾವ ದಿಕ್ಕಿನಲ್ಲಿ ಪಾತಿ ಮಾಡಲಾಗಿತ್ತು

ಎಂದು ಹೇಳಲು ಸಾಧ್ಯವಾಗುವುದಿಲ್ಲ. ಆ ಕಾಲಕ್ಕೆ ಆ ನಾಲ್ಕೂ ಗಿಡಗಳ ಫೋಟೋ ತೆಗೆಯಲಾಗಿತ್ತು. ಆಗ ಆ ಗಿಡಗಳಲ್ಲಿಯ ಹೂ ಮತ್ತು ಹಣ್ಣಿನ ಭಾಗಗಳನ್ನು ಪ್ರತ್ಯೇಕಿಸಲಾಗಿಲ್ಲ.

**6**. ನಾವು ಹೋದಂತಹ ಇನ್ನೊಂದು ಜಮೀನಿನಲ್ಲಿದ್ದಂತಹ ಕೃಷಿ ಹೊಂಡದ ಉದ್ದ ಅಗಲವನ್ನು ಹೇಳಲು ಸಾಧ್ಯವಾಗುವುದಿಲ್ಲ. ಅಲ್ಲಿ ಇದ್ದಂತಹ ಆ ಮೂರಾ ಗಾಂಜಾ ಗಿಡಗಳ ಫೋಟೋಗಳನ್ನು ತಗೆಯಲಾಯಿತು. ಆ ಗಿಡಗಳಲ್ಲಿದ್ದಂತಹ ಹೂವು ಮತ್ತು ಹಣ್ಣಿನ ಭಾಗಗಳನ್ನು ಕೂಡಾ ಪ್ರತ್ಯೇಕಿಸಲಿಲ್ಲ. ಆ ಎರಡೂ ಜಮೀನುಗಳಲ್ಲಿ ದೊರೆತಂತಹ ಗಿಡಗಳ ಬಗ್ಗೆ ಪ್ರತ್ಯೇಕವಾಗಿ ಮಹಜರುಗಳನ್ನು ಮಾಡಿಲ್ಲ. ಆಗ ಆ ಗ್ರಾಮಗಳ ಜನ ಅಲ್ಲಿ ಸೇರಿದ್ದರು. ಅಲ್ಲಿ ಸೇರಿದ್ದಂತಹ ಜನಗಳಿಂದ ನಮ್ಮ ಮೇಲಾಧಿಕಾರಿ ಮಾಹಿತಿ ಪಡೆದಿಲ್ಲ ಆದರೆ ಗ್ರಾಮ ಲೆಕ್ಕಿಗರಿಂದ ಮಾಹಿತಿ ಪಡೆದರು. ಆ ಗಾಂಜಾ ಗಿಡಗಳನ್ನು ಯಾರು ಬೆಳೆಸಿದ್ದಾರೆಂಬ ಬಗ್ಗೆ ಅಲ್ಲಿ ಸೇರಿದ್ದ ಜನರಿಂದ ಮಾಹಿತಿ ಪಡೆದಿಲ್ಲ, ಏಕೆಂದರೆ ಆರೋಪಿತರು ಅವುಗಳನ್ನು ತಾವೇ ಬೆಳೆಸಿದ್ದಾಗಿ ಹೇಳಿದ್ದರು. ದೂರವಾಣಿ ಮೂಲಕ ಮೇಲಾಧಿಕಾರಿಗಳಿಗೆ ಅಬಕಾರಿ ನಿರೀಕ್ಷಕರು ಮಾಹಿತಿ ನೀಡಿದ್ದರ ಬಗ್ಗೆ ಸಿಡಿಆರ್ ನ್ನು ತಯಾರಿಸಿಲ್ಲ.

7. ನಾವು ಆ ದಿನ ಆ ಜಮೀನಗಳಿಗೆ ಹೋದಾಗ ಅಲ್ಲಿ ಯಾರೂ ಇರಲಿಲ್ಲ ಮತ್ತು ಅಲ್ಲಿ ಗಾಂಜಾ ಗಿಡಗಳನ್ನು ಬೆಳೆಯಲಾಗಿರಲಿಲ್ಲ ಎನ್ನುವುದು ಸರಿಯಲ್ಲ. ಅಲ್ಲಿ ಆ ಗಿಡಗಳನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಕ್ರಮ ಜರುಗಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆ ದಿನ ಆ ಜಮೀನುಗಳಿಗೆ ಹೋಗಿಯೇ ಇಲ್ಲ ಕಛೇರಿಯಲ್ಲಿಯೇ ಕುಳಿತು ತಯಾರಿಸಲಾದಂತಹ ಮಹಜರಿಗೆ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರು ಆ ಜಮೀನುಗಳ ಮಾಲೀಕರು ಅಲ್ಲ ಮತ್ತು ಅವರು ಅ ಜಮೀನುಗಳ ಸ್ವಾಧೀನದಲ್ಲೂ ಇರಲಿಲ್ಲ ಎಂದರೆ ಅವರು ಮಾಲೀಕರೆಂದು ಆ ನಂತರ ಗೊತ್ತಾಗಿದೆ. ಅವರುಗಳು ನಾವು ಹೋದಾಗ ಅಲ್ಲಿ ಇದ್ದರು ಮತ್ತು ಆ ಗಾಂಜಾ ಗಿಡಗಳನ್ನು ತಾವೇ ಬೆಳೆದಿದ್ದಾಗಿ ನಮ್ಮ ಮುಂದೆ ಒಪ್ಪಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ತೂಕದ ಯಂತ್ರ ಸರಿಯಾಗಿ ಕೆಲಸ ನಿರ್ವಹಿಸುತ್ತದೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಂಡು ಹೋಗಿದ್ದೆವು. ಆ ಎರಡೂ ಜಮೀನುಗಳ ಗಾಂಜಾ ಗಿಡಗಳನ್ನು ಪ್ರತ್ಯೇಕವಾಗಿ ತೂಕ ಮಾಡಿದಾಗ ಒಂದು ತೂಕ ಬಂದಿದ್ದು, ಒಟ್ಟುಗೂಡಿಸಿ ತೂಕ ಮಾಡಿದಾಗ **50** ಗ್ರಾಂ ವ್ಯತ್ಯಾಸ ಬಂದಿದ್ದು ಕಾರಣ ನಮ್ಮ ತೂಕದ ಯಂತ್ರ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ತೂಕದ ಯಂತ್ರ ಸರಿಯಾಗಿಯೇ ಇತ್ತು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಆ ಗಿಡಗಳನ್ನು ತೂಕ ಮಾಡಲೆಂದು ಹೋಗುವಾಗ ಅವುಗಳ

ಬಡ್ಡೆಯಲ್ಲಿದ್ದ ಮಣ್ಣು ಬಹುಶಃ ಉದುರಿರಬೇಕು. ಆ ತೂಕದ ಯಂತ್ರ ನಮ್ಮ ಇಲಾಖೆಗೆ ಸಂಬಂಧಿಸಿದ್ದು. ಅದನ್ನು ನಾವುಗಳೇ ನಿರ್ವಹಣೆ ಮಾಡುತ್ತೇವೆ. ಮನೆಯಲ್ಲಿದ್ದ ಆರೋಪಿತರನ್ನು ಕರೆದುಕೊಂಡು ಬಂದು ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.